ಪೋಲೀಸ್ ಗೋಲಿಬಾರ್‌ನಲ್ಲಿ ಸೊಂದವರಿಗೆ ಪರಿಹಾರ ಧನ

೧೫೦(೪೩೨) ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ). —ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಡಿಸೆಂಬರ್ ೧೯೮೮ರಲ್ಲಿ ಬೆಂಗಳೂರು, ಮೈಸೂರು ಮತ್ತು ತುಮಕೂರಿನಲ್ಲಿ ನಡೆದ ಪೋಲೀಸು ಗೋಲೀಬಾರಿನಲ್ಲಿ ಸತ್ತವರಿಗೆ ಪರಿಹಾರವನ್ನು ಸರಕಾರವು ಮಂಜೂರು ಮಾಡಿದೆಯೇ ?

ಆ) ಹಾಗಿದ್ದರೆ ಮರಣಹೊಂದಿದವರ ಹಾಗೂ ಗಾಯಗೊಂಡವರ ಸಂಬಂಧಿಕರಿಗೆ ಪಾವತಿ ಮಾಡಿದ ಪರಿಹಾರದ ಪೊಬಲಗೆಷ್ಟು ಪಾವತಿ ಮಾಡಿಲ್ಲದಿದ್ದರೆ ಕಾರಣಗಳೇನು ?

ಇ) ಪೋಲೀಸ್ ಗೋಲೀಬಾರ್ ನಡೆದ ಎಲ್ಲಾ ಸ್ಥಳಗಳಲ್ಲಿ ಮರಣಹೊಂದಿದವರಿಗೆ ಪರಿಹಾರವನ್ನು ನೀಡಲಾಗಿದೆಯೇ ಅಥವಾ ಕೆಲವು ನಿಗದಿತ ಸ್ಥಳಗಳಲ್ಲಿ ಮಾತ್ರವೇ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಹೌದು

ಆ)

		ಮರಣ ಹೊಂದಿದವರಿಗೆ	ಗಾಯ ಗೊಂಡವರಿಗೆ
೧.	ಬೆಂಗಳೂರು	೨,೨೦,೦೦೦	೨೭,೫೦೦
೨.	ಮೈಸೂರು	೮೦,೦೦೦	೨೫,೦೦೦
೩.	ತುಮಕೂರು	೨೦,೦೦೦	೫,೦೦೦

ಇ) ಹೌದು. ಪೋಲೀಸು ಗೋಲೀಭಾರ್ ನಡೆದ ಎಲ್ಲಾ ಸ್ಥಳಗಳಲ್ಲಿಯೂ ಹಾನಿಗೊಳಗಾದವರಿಗೆ ಪರಿಹಾರವನ್ನು ಕೊಡಲಾಗಿದೆ.

ಶ್ರೀಮತಿ ಮುಕ್ತರುನ್ನಿಸ.—ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೇ, ಇನ್‌ಜ್ಯೂರ್ಡ್ ಪರ್ಸನ್‌ಗಳಿಗೆ ಈವರೆಗೆ ಹಣ ಸಿಕ್ಕಿಲ್ಲ ಮತ್ತು ಅಂಗಡಿಯಾಗಿರತಕ್ಕಂತಹವರಿಗೂ ಕೂಡ ಹಣ ಸಿಕ್ಕಿಲ್ಲ ಅವರು ದಾರಿಯಲ್ಲಿ ಬಿದ್ದಿದ್ದಾರೆ. ಅವರಿಗೆ ಜಾಸ್ತಿ ಹಣವನ್ನು ಒದಗಿಸಿ ಕೊಡಬೇಕು ಮತ್ತು ಈವರೆಗೆ ಯಾರುಯಾರಿಗೆ ಹಣ ಸಿಕ್ಕಿಲ್ಲ ಅವರಿಗೆ ಹಣವನ್ನು ಆದಷ್ಟು ಬೇಗನೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಅಧಿಕಾರಿಗಳು ಮಹಜರ್ ಮಾಡಿರತಕ್ಕಂತಹ ಪಟ್ಟಿಯಲ್ಲಿ ಯಾರಿಗಾದರೂ ಪರಿಹಾರ ಕೊಡದೇ ಇದ್ದರೆ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿದು ಹೋಗಿದೆ ಉಳಿದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬಹುದಿತ್ತು ಆದರೆ ನಿಮ್ಮೆಲ್ಲರ ಹಿತದೃಷ್ಟಿಯಿಂದ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡುತ್ತೇನೆ ಎಲ್ಲರೂ ಒಂದೊಂದು ಕ್ಲಾರಿಫಿಕೇಷನ್ ಅನ್ನು ಮಾತ್ರ ಕೇಳಬೇಕು.

ಬೀಳಗಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು

೧೫೧(೫೮) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ). —ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೆಳಗಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಕಟ್ಟಿಸಲು ಸರ್ಕಾರ ನಿರ್ಧರಿಸಿದ್ದರೆ ಅದರ ಅಂದಾಜು ವೆಚ್ಚ ತಯಾರಾಗಿದೆಯೇ ?